925

ಮೈಸೂರ ಗೆಜೆಟ.

ನಂ. 47 ಸರ್ಕಾರದಿಂದ ಫಾಯಿಷ್ ಆದ್ದು. ಸ್ ೧೮೮೪.

ಬೆಂಗಳೂರು, ಶನಿವಾರ, ನವಂಬರ್ ತಾ|| 22, ಸ್ ೧೮೮೪.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ಟಿಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೆ ಬುಕ್‌ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್‌ಸೂಪರ್ಟಿಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ಮ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ನೊಕ್ತಾಂ ಮೈಸೂರು, ತಾರೀಖು 16ನೇ ಅಕ್ಟೋಬರ್ 1884.

ನಂ. 148.—ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಉತ್ಪತ್ತೀ ಬಾಬತು ಗಂಧದ ಮರದ ಸಾಲೀಯನಾ ಹರಾಜುಗಳು ಇದರಡೀಕಂಡ ತಾರೀಖು ವ ಸ್ಥಳಗಳಲ್ಲಿ ಆಯಾ ಡಿಸ್ಟ್ರಿಕ್ಟಿನ ಡಿ|| ಕಮ್ಮಿಷನರ್ ವ ಫಾರೆಸ್ಟು ಆಫೀಸರ್‌ಗಳಿಂದ ನಡಿಸಲ್ಪಡುತ್ತೆ:—

		ಸ್ವಲ್ಪ ಹೆಚ್ಚು ಕಡಿಮೆಯಾಗಿ ಟನ್‌ಗಳು.
ಶ್ರೀರಂಗಪಟ್ಟಣ, ತಾರೀಖು 1ನೇ ಡಿಸಂಬರ್ 1884		
ಹುಣಸೂರು, ತಾರೀಖು 4ನೇ ಡಿಟೋ „	..	500
ಬೆಂಗಳೂರು, ತಾರೀಖು 8ನೇ ಡಿಟೋ „	..	280
ಸೊರಬ, ತಾರೀಖು 13ನೇ ಡಿಟೋ „	..	200
ಅನಂತಪುರ, ತಾರೀಖು 18ನೇ ಡಿಟೋ „	..	200
ಶಿವಮೊಗ್ಗಾ, ತಾರೀಖು 22ನೇ ಡಿಟೋ „	..	500
ತೀರ್ಥಹಳ್ಳಿ, ತಾರೀಖು 7ನೇ ಜನವರೀ 1885	..	200
ಚಿಕ್ಕಮಗಳೂರು, ತಾ|| 14ನೇ ಡಿಟೋ „	..	200
ಹಾಸನ, ತಾರೀಖು 21ನೇ ಡಿಟೋ „	..	400

ಹರಾಜಿನ ಪರತ್ತುಗಳು.—ಸ್ ೧೮೭೪ನೇ ಇಸವಿ ಡಿಸಂಬರ್ 5ನೇ ಮತ್ತು ೪೮ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಘಾಯಿಷ್ಮಾ ಡಲ್ಪಟ್ಟ ಪ್ರಕಾರ ಇರತೆಕ್ಕವು, ಮತ್ತು ಹರಾಜ್ ಕಾಲದಲ್ಲಿ ಪೋದಲ್ಪಡುವವು. ತೀರ್ಥಹಳ್ಳಿ, ಚಿಕ್ಕಮಗಳೂರು ಮತ್ತು ಹಾಸನ ಈ ಸ್ಥಳಗ ಳಲ್ಲಿ ಕೊಂಡುಕೊಳ್ಳುವ ಗಂಧದ ಮರಗಳ ಕಿಮ್ಮತ್ ಪಾವತೀ ಬಗ್ಯೆ ವಾಯಿದೆಯು, ೧೮೮೫ನೇ ಇಸವೀ ಮಾರ್ಚೀ 25ನೇ ತಾರೀಖಿಗೆ ಆಖೈರಾಗುವದು.

ನಂ. 159.—ಟೆಲಿಗ್ರಾಫ್ ಮನಿ ಆರ್ಡರ್ಸ್ ಯಾನೆ ತಂತೀ ಮೂಲಕ ಕಳುಹಿಸಲ್ಪಡುವ ಧನಿ ಆರ್ಡರ್ಸಿಗೆ ಸಂಬಂಧಪಟ್ಟ ಯಿದರ ೀ ಕಂಡ ಪೋಸ್ಟಲ್ ನೋಟೀಸು, ಯಿಂಡ್ಯ ದೇಶದ ಪೋಸ್ಟ್ ಆಫೀಸಿನ ಡೈರೆಕ್ಟರ್ ಜನರಲ್ ಯವರಿಂದ ಕೊಡಲ್ಪಟ್ಟು, ಸರ್ವರ ತಿಳುವಳಿಕೆ ಬಗ್ಯೆ ಪುನಃ ಪ್ರಕಟಿಸಲ್ಪಡುತ್ತೆ.

ಪೋಸ್ಟಲ್ ನೋಟೀಸ್—ಟೆಲಿಗ್ರಾಫ್ ಮನಿ ಆರ್ಡರ್‌ಗಳು.

ಸ್ ೧೮೮೪ನೇ ಇಸವಿ ಅಕ್ಟೋಬರ್ 1ನೇ ತಾರೀಖು ಲಾಗಾಯತು, ಟೆಲಿಗ್ರಾಫ್ ಮನಿ ಆರ್ಡರ್‌ಗಳು ಯಲ್ಲ ಮನಿ ಆರ್ಡರ್ ಆಫೀ ಸುಗಳಲ್ಲೂ ಪಡೆಯಬಹುದು.

2. ಟೆಲಿಗ್ರಾಫ್ ಮನಿ ಆರ್ಡರ್ ಅಂದರೆ ಪೋಸ್ಟ್ ಆಫೀಸ್ ಮೂಲಕ ಬಂದು ಮೊಬಲಗಿನ ಪಾವತೀ ಬಗ್ಯೆ ಪೋಸ್ಟ್ ಆಫೀಸಿನಿಂದ ಕೊಡಲ್ಪಡುವ ಆರ್ಡರ್ ; ಹಣ ಪಾವತೀ ಅಂಕವು ಬಂದು ಪೋಸ್ಟ್ ಆಫೀಸಿನಿಂದ ಮತ್ತೊಂದು ಪೋಸ್ಟ್ ಆಫೀಸಿಗೆ ತಂತೀ ವರ್ತಮಾನ ಕೊಡ ಲ್ಪಟ್ಟು ಮೊಬಲಗು ಸಲ್ಲಬೇಕಾದ ಮನುಷ್ಯನ ವಾಸಸ್ಥಾನದಲ್ಲೇ ಹಣ ಪಾವತೀ ಮಾಡಲ್ಪಡುವದು. ಟೆಲಿಗ್ರಾಫ್ ಮನಿ ಆರ್ಡರುಗಳಿಗೆ ಯಾವ ಮನಿ ಆರ್ಡರ್ ಆಫೀಸಿನಲ್ಲಾಗಲಿ ಹಣ ಪಾವತೀ ಮಾಡಲ್ಪಡುವದು.

3. ಮನಿ ಆರ್ಡರು ಕೊಡಲ್ಪಡಬೇಕಾದ ಸ್ಥಳದಲ್ಲಿ ಗವರ್ಮೆಂಟ್* ಟೆಲಿಗ್ರಾಫ್ ಆಫೀಸು ಯಿಲ್ಲದ ಪಕ್ಷಕ್ಕೆ, ಆರ್ಡರು ಮುಂದಕ್ಕೆ ಟೆಲಿಗ್ರಾಫ್ ಮೂಲಕ ಕಳುಹಿಸಲ್ಪಡ ತಕ್ಕ ಬಗ್ಯೆ ಅತ್ಯಂತ ಸಮೀಪವಾದ ಗವರ್ಮೆಂಟ್ ಟೆಲಿಗ್ರಾಫ್ ಆಫೀಸಿಗೆ ಟಪ್ಪಾಲ್ ಮೂ ಲಕ ಕಳುಹಿಸಲ್ಪಡತಕ್ಕದ್ದು. ಹಣ ಪಾವತೀ ಮಾಡಲ್ಪಡಬೇಕಾದ ಸ್ಥಳದಲ್ಲಿ ಗವರ್ಮೆಂಟ್ ಟೆಲಿಗ್ರಾಫ್ ಆಫೀಸು ಯಿಲ್ಲದಿದ್ದರೆ, ಆರ್ಡರು ಅತ್ಯಂತ ಸಮೀಪವಾದ ಗವರ್ಮೆಂಟ್ ಟೆಲಿಗ್ರಾಫ್ ಆಫೀಸಿನಿಂದ ಟಪ್ಪಾಲ್ ಮೂಲಕ ಕಳುಹಿಸಲ್ಪಡತಕ್ಕದ್ದು.

*(ಗಾರೆಂಟಿ ಯಾನೆ ಭರವಸೆ ಕೊಡಲ್ಪಟ್ಟ ಯಾ ಸಂಸ್ಥಾನದ) ರೇಲ್ವೆ ಟೆಲಿಗ್ರಾಫ್ ಆಫೀಸು ಗಳು, ಈ ರೂಲ್ಸಿನ ಅರ್ಥ ರೀತ್ಯ ಗವರ್ಮೆಂ ಟ್ ಟೆಲಿಗ್ರಾಫ್ ಆಫೀಸ್‌ಗಳಲ್ಲವು.

4. ಟೆಲಿಗ್ರಾಫ್ ಮನಿ ಆರ್ಡರ್‌ಗಳ ಮೇಲೆ ಕೊಡಲ್ಪಡಬೇಕಾದ ರುಸುಮಿನ ದರಗಳು ಇದರಡಿಕಂಡ ಪ್ರಕಾರ ಯಿರತಕ್ಕವು:—

			ರೂ.	ಆ.
ಮೊಬಲಗು ರೂಪಾಯಿ 25ಕ್ಕೆ ಮೇಲ್ಪಡದೆ ಯಿದ್ದರೆ	..	..	0	8
ಡಿಟೋ ರೂಪಾಯಿ 25ಕ್ಕೆ ಮೇಲ್ಪಟ್ಟು ರೂಪಾಯಿ 50ಕ್ಕೆ ಮೇಲ್ಪಡದೆ ಇದ್ದರೆ	..	..	0	12
ಡಿಟೋ ರೂಪಾಯಿ 50ಕ್ಕೆ ಮೇಲ್ಪಟ್ಟು ರೂ. 75ಕ್ಕೆ ಮೇಲ್ಪಡದೆ ಇದ್ದರೆ	..	..	1	2
ಡಿಟೋ ರೂಪಾಯಿ 75ಕ್ಕೆ ಮೇಲ್ಪಟ್ಟು ರೂ. 100ಕ್ಕೆ ಮೇಲ್ಪಡದೆ ಇದ್ದರೆ	..	..	1	8
ಡಿಟೋ ರೂಪಾಯಿ 100ಕ್ಕೆ ಮೇಲ್ಪಟ್ಟು ರೂ. 125ಕ್ಕೆ ಮೇಲ್ಪಡದೆ ಇದ್ದರೆ	..	..	1	14
ಡಿಟೋ ರೂಪಾಯಿ 125ಕ್ಕೆ ಮೇಲ್ಪಟ್ಟು ರೂ. 150ಕ್ಕೆ ಮೇಲ್ಪಡದೆ ಇದ್ದರೆ	..	..	2	4

5. ಹಣ ಪಾವತೀ ಬಗ್ಯೆ ಕೊಡಲ್ಪಡುವ ತಂತೀ ವರ್ತಮಾನಕ್ಕೋಸ್ಕರ, ಕಳುಹಿಸಲ್ಪಡುವ ಹಣದ ಮೊತ್ತವು ಗಣನೆ ಮಾಡದೆ ಪರಂತು ವಬ್ಬ ಮನುಷ್ಯನಿಗೆ ಪಾವತೀ ಮಾಡಲ್ಪಡಬೇಕಾದ ಮೊಬಲಗು 600 ರೂಪಾಯಿಗಳಿಗಿಂತ ಮಿಾರದೆ ಯಿದ್ದರೆ, ಯರಡು ರೂಪಾ ಯಿ ಯೇಕರೀತಿ ಚಾರ್ಜು ಮಾಡಲ್ಪಡುವದು. ಈ ಟೆಲಿಗ್ರಾಫ್‌ಗಳು "ಜರೂರಾಗಿ" ಕಳುಹಿಸಲ್ಪಡುವವು.

6. ಮನಿ ಆರ್ಡರ್ ಫಾರಮಿಗೆ ಲಗತ್ತು ಯಿರುವ ಕೂರ್ಪನ್ ಕಾಗದದ ಮೇಲೆ ಹಣ ಕಳುಹಿಸುವವನು ಹಣ ಪಾವತಿಯಾಗು ವ ಮನುಷ್ಯನಿಗೆ ತಿಳಿಸಲಪೇಕ್ಷಿಸುವ ಖಾಸಗಿ ವರ್ತಮಾನವನ್ನು ಬರೆಯಬಹುದು. ಅಂಥಾ ಖಾಸಗಿ ವರ್ತಮಾನವು ಹಣ ಪಾವತೀ ಯಾಗುವದಕ್ಕೆ ಕೊಡುವ ಟೆಲಿಗ್ರಾಫ್ ನೊಂದಿಗೆ ಕೇರಿಸಲ್ಪಟ್ಟು ಮಾತು ಬಂದಕ್ಕೆ 2 ಆಣೆಗಳಂತೆ ಚಾರ್ಜು ವಸೂಲ್ಮಾಡಲ್ಪಡುವದು. ಹಣ ಕಳುಹಿಸುವವನು ಟೆಲಿಗ್ರಾಫ್ ಡಿಪಾರ್ಟಮೆಂಟಿನ ಚಾಲ್ತಿ ರೂಲ್ಸ್‌ಗಳನುಸರಿಸಿ ಜವಾಬಿನ ಬಗ್ಯೆ ಮುಂದಾಗಿ ಹಣ ಪಾವತೀ ಮಾಡಬಹುದು.

7. ಹಣ ಪಾವತಿಯಾದ ಬಗ್ಯೆ ಟೆಲಿಗ್ರಾಫ್ ಮೂಲಕ ಸರಕಾರಿ ರೀತಿಯನ್ನು ಹಣ ಕಳುಹಿಸುವವನು ಹೊಂದಬಹುದು. ಅಂ ಥಾ ರೀತಿಬಗ್ಯೆ ಬಂದು ರೂಪಾಯಿ ಚಾರ್ಜು ಕೊಡಪೇಕಾಗಿರುತ್ತೆ.

8. ಟೆಲಿಗ್ರಾಫ್ ಮೂಲಕ ಕಳುಹಿಸಲ್ಪಟ್ಟ ಮನಿ ಆರ್ಡರಿನ ಹೊಬಲಗು, ಹಣ ಪಾವತೀ ಮಾಡಬೇಕಾದ ಆಫೀಸಿಗೆ ಟೆಲಿಗ್ರಾಫ್ ವರ್ತಮಾನ ತಲಪಿದ ವಡನೆ ಅಂಚೇ ಜವಾನನ ಮೂಲಕ ಹಣ ಪಾವತೀಯಾಗಬೇಕಾದ ಮನುಷ್ಯನ ವಾಸಸ್ಥಾನದಲ್ಲಿ ಪಾವತೀ ಮಾಡಲ್ಪಡುವದು. ಹಣದ ಸಂಗಡ ತಂತೀ ವರ್ತಮಾನದ ಬಂದು ನಕಲು ಹಣ ಪಾವತೀ ಮೊಡಲ್ಪಡುವ ಮನುಷ್ಯನಿಗೆ ಕೊಡಲ್ಪಡುವದು.

9. ಈ ತಪೇಲ್ ಕಂಡ ರೂಲ್‌ಸಿನ ಕಾಪಿಯು, ಪೋಸ್ಟ್ ಆಫೀಸಿಗೆ ದರಖಾಸ್ತು ಮಾಡಿ ಪಡೆಯಬಹುದು.

ತಾರೀಖು 30ನೇ ಅಕ್ಟೋಬರ್ 1884.

ನಂ. 163.—ಸ್ಯ 1882ನೇ ಇಸವಿ ಡಿಸಂಬರ್ 9ನೇ ಮುಕ್ತಂ 147ನೇ ನಂಬರ್ ಇಸ್ತಿಹಾರ್ ನಾಮೆಯನ್ನು ಬದಲಾಯಿಸುವದರಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿನ ಇದರಡೀ ಕಂಡ ಗ್ರಾಮಗಳ ವರ್ಗಾವರ್ಗಿಯು ಹುಕುಂ ಮಾಡಲ್ಪಟ್ಟಿರುತ್ತೆ:—

(1) ಆನೇಕಲ್ ತಾಲ್ಲೂಕಿನಿಂದ ಕರ್ಮಾರ್ಹಳ್ಳೀ ತಾಲ್ಲೂಕಿಗೆ.

ಸೋಮನಹಳ್ಳಿ ಹೋಬಳಿ.

1 ಸೋಮನಹಳ್ಳಿ ..	7 ಹನುಮಂತಪುರ ..	13 ಪೊಗಿಜಕೊಡಹಳ್ಳಿ
2 ಅಲಕಬಳಲು ..	8 ರಾವಗೊಡ್ಲು ..	14 ಕಾಯಂಗುತ್ತಾ ತಾರಲು
3 ತಾಟಕಪ್ಪೆ (ಬೇಚರಾಕ್) ..	9 ಗಬ್ಬಾಡಿ ..	15 ಕಾಯಂಗುತ್ತಾ ಗುಲಕಮಲೆ
4 ವಡ್ಡರಪಾಳ್ಯ ..	10 ಕಗ್ಗಲಹಳ್ಳಿ ..	16 ಡಿಟೋ ನೆಲಗುಳಿ
5 ಮುಕ್ಕೊಡ್ಲು ..	11 ಯಡಮುಡ ..	17 ಡಿಟೋ ಚೂಡಹಳ್ಳಿ
6 ಸುಂಕದಕಟ್ಟೆ (ಬೇಚರಾಕ್) ..	12 ನೆತ್ತಿಗೆರೆ ..	

ಹಾರೋಹಳ್ಳಿ ಹೋಬಳಿ.

18 ಹಾರೋಹಳ್ಳಿ ..	27 ಕೃಷ್ಣೋಲಹಳ್ಳಿ ..	35 ಹುಲಗೊಂಡಹಳ್ಳಿ
19 ಕೋಣಸಂದ್ರ ..	28 ಭೀಮಸಂದ್ರ ..	36 ಗಾರೆ ಪಾಳ್ಯ (ಬೇಚರಾಕ್)
20 ತಾಟಕೆರೆ ..	29 ಬನವಾಸಿ ..	37 ಮೇದಮಾರನಹಳ್ಳಿ
21 ಮೂಡೇನಹಳ್ಳಿ ..	30 ಗೊಟ್ಟಿಗೆಹಳ್ಳಿ ..	38 ಹೊಸಕೋಟೆ
22 ಅತ್ತಿಕುಪ್ಪ ..	31 ಬಲಗನಕುಪ್ಪೆ ..	39 ವಡೇರಹಳ್ಳಿ
23 ಕೊಳಲಗೊಂದಿ ..	32 ದೇವಸಂದ್ರ ..	40 ಮಾರಸಂದ್ರ
24 ಕಳ್ಳನಕುಪ್ಪೆ ..	33 ಪುಣಿಯಂಬಾಳು (ಬೇಚರಾಕ್) ..	41 ಮಾರಲಗೆರೆ
25 ಜಕ್ಕಸಂದ್ರ ..	34 ಯರ್ರಹಳ್ಳಿ ..	42 ದ್ಯಾವರ ಕಗ್ಗಲಹಳ್ಳಿ
26 ಗಡವನಹಳ್ಳಿ ..		

(2) ಬೆಂಗಳೂರು ತಾಲ್ಲೂಕಿನಿಂದ ಕಾನಕರ್ಮಾರ್ಹಳ್ಳಿ ತಾಲ್ಲೂಕಿಗೆ.

1 ಹುತ್ತಿ ..	2 ನಾಗನಾಯಕನಹಳ್ಳಿ ..	3 ಕಗ್ಗಿಪುರ (ಸರ್ವಮಾನ್ಯ)

(3) ಬೆಂಗಳೂರು ಡಿಸ್ಟ್ರಿಕ್ಟು, ಹೊಸಕೋಟೆ ತಾಲ್ಲೂಕು, ಚನ್ನರಾಯಪಟ್ಟಣದ ಹೋಬಳಿಯಿಂದ ಕೋಲಾರ ಡಿಸ್ಟ್ರಿಕ್ಟು, ಚಿಕ್ಕಬಳ್ಳಾಪುರ ತಾಲ್ಲೂಕು, ದೇವನಹಳ್ಳಿ ಹೋಬಳಿಗೆ.

1 ಹಾರಲೂರು ..	6 ಯಲಿಯೂರು ..	10 ಗಡ್ಡದನಾಗನಹಳ್ಳಿ
2 ಬೊಮ್ಮನಹಳ್ಳಿ ..	7 ಗೋಕೆರೆ ಬಾಚಹಳ್ಳಿ ..	11 ಅಗಳಕೋಟೆ
3 ಚೆನ್ನಹಳ್ಳಿ ..	8 ದೊಡ್ಡ ತಪ್ಪಮಂಗಲ ..	12 ವೊಟ್ಟಬೂರಲು
4 ಪೋಲನಹಳ್ಳಿ ..	9 ತಿಮ್ಮನಹಳ್ಳಿ ..	13 ಚಿಕ್ಕರಾಮನಹಳ್ಳಿ
5 ಮಂಡಿಬೆಲೆ ..		

ತಾರೀಖು 4ನೇ ನವಂಬರ 1884.

ನಂ. 164.—ಸ್ಯ 1883ನೇ ಇಸವಿ ಮಾರ್ಚೀ 5ನೇ ವಮ್ಮುಂ 65ನೇ ನಂಬರ ಇಸ್ತಿಹಾರ ನಾಮೆಯನ್ನು ತಿದ್ದುಪಡಿಮಾಡಿ, ಚನ್ನಪಟ್ಟಣದ ಡೆಪ್ಯುಟಿ ಅಮಲ್‌ದಾರ್ರ ಭೂಜಿನ ಬಂದು ಭಾಗವಾಗಿದ್ದ ವಿರುಪಾಕ್ಷಿಪುರ ಮ ಹೊಂಗನೂರ ಹೋಬಳಿಗಳನ್ನು, ಕ್ಲೋಸ್‌ಪೇಟೆ ತಾಲ್ಲೂಕು ಅಮಲ್‌ದಾರ್ರ ಅಧಿಕಾರಕ್ಕೆ ಇದರಿಂದ ವರ್ಗ ಮಾಡಲ್ಪಟ್ಟಿರುವೆ.

ತಾರೀಖು 5ನೇ ನವಂಬರ 1884.

ನಂ. 168.—ಬೆಂಗಳೂರು ಷಹರ ಪೊಲೀಸ್ ಇಲಾಖೆ ಪೆರ್ಷ್ಯ ವ ಗ್ರಾಚ್ಯುಯಿಟಿಗಳಿಗೆ ಸಂಬಂಧಪಟ್ಟ ಮೈಸೂರು ದಿವಾನರವರ ಯಿದರಡೀಕಂಡ ಆರ್ಡರ್ ಸರ್ವರ ತಿಳುವಳಿಕೆ ಬ್ಗೈ ಪ್ರಕಟಿಸಲ್ಪಡುತ್ತ್ದೆ :—

ನಂಬರ್ 4515–16—341, ತಾರೀಖು 31ನೇ ಆಕ್ಟೋಬರ್ 1884.

ಆರ್ಡರ್.—ಬೆಂಗಳೂರು ಷಹರಿನ ಪೊಲೀಸ್ ಸೂಪರ್ ಅನ್ಯುವಿರ್ಷ ಫಂಡಿಗೆ 1884ನೇ ಇಸವಿ ಏಪ್ರಿಲ್ 1ನೇ ಮುರ್ಕುಂ ವರಿಗೆ 9,860—1—5 ರೂಪಾಯಿ ಜಮೆ ಆಗಿರುತ್ತೆ.

2. ಬೆಂಗಳೂರು ಷಹರ ಪೊಲೀಸ್ ಇಲಾಖೆಯು, ತಲಬ್ ವಿಷಯದಲ್ಲಿ, ದೇಶದ ಇತರ ಭಾಗಗಳ ಪೊಲೀಸ್ ಇಲಾಖೆ ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲೇ ಪ್ರಾಯಶಃ ಯಿರುತಿದೆ; ಮತ್ತು ಈ ದೇಶದ ಪೊಲೀಸ್ ಇಲಾಖೆ ತಮಾಂ ನವಕರರಿಗೂ, ಸರ್ಕಾರ ನವಕರರು ಇತರ ಇಲಾಖೆಗಳಲ್ಲಿ ಪಡೆಯುವಂತೆಯೇ ಪೆರ್ಷ್ಯ ವ ಗ್ರಾಚ್ಯುಯಿಟಿಗಳು ಸರ್ಕಾರದಿಂದ ಕೊಡಲ್ಪಡುತ್ತಾ ಯಿಧೆ. ಈ ಕಾರಣಗಳಿಂದ ಗವರ್ಮೆಂಟಿನವರು ಹುಕ್ಕುಂ ಮಾಡುವದೇನಂದರೆ, 1884ನೇ ಇಸವಿ ನವಂಬರ್ ಗುರ್ಕ್ಕೇ ತಾರೀಖು ಲಾಗಾಯತು ಬೆಂಗಳೂರು ಷಹರ್ ಪೊಲೀಸ್ ಸೂಪರ್ ಅನ್ಯುವಿರ್ಷ ಫಂಡ್ ಮೌಕೂಫಗತಕ್ಕದ್ದು ಮತ್ತು ಸದರೀ ತಾರೀಖಿನಲ್ಲಿ ಸದರೀ ಫಂಡಿಗೆ ಶೇರಿರತಕ್ಕ ತಮಾಂ ಜಾಮೀರ್ದಾಗಳೂ, ಪೊಬಲಗಗಳೂ, ಮೈಸೂರು ಗವರ್ಮೆಂಟಿಗೆ ವರ್ಗ ಮಾಡಲ್ಪಟ್ಟು ಗವರ್ಮೆಂಟಿನ ವಟ್ಟು ಕೆಲಸಗೆಳಿಗೋಸ್ಕರ ಕೊಟ್ಟು ಬಿಡಲ್ಪಡತಕ್ಕದ್ದು.

3. ಮೇಲೆ ಕಂಡ 1884ನೇ ಇಸವಿ ನವಂಬರ 1ನೇ ಮುರ್ಕುಂ ಲಾಗಾಯತು ಬೆಂಗಳೂರು ಷಹರ್ ಪೊಲೀಸ್ ನವಕರರ ತಲಬಿನಿಂದ ಸದರೀ ಫಂಡಿಗೆ ಚಂದಾ ತರೀಕ್ ವಸೂಲ್ ಮಾಡಲ್ಪಡಕೂಡದು.

4. ಪೆರ್ಷ್ಯ ವ ಗ್ರಾಚ್ಯುಯಿಟಿಗಳ ವಿಷಯದಲ್ಲಿ ಇಂಡ್ಯ ಗವರ್ಮೆಂಟಿನವರ 1877ನೇ ಇಸವಿ ಮೇ 11ನೇ ಮುರ್ಕುಂ 549ನೇ ನಂಬರಿನ ಇಸ್ತಿಹಾರ್ ನಾಮೆಯಲ್ಲಿ ಮುಂಜಾರ್ಮಾಡಲ್ಪಟ್ಟ ನಿಬಂಧನೆಗಳು ತಾತ್ಕಾಲಿಕದಲ್ಲಿ ಬೆಂಗಳೂರು ಷಹರ್ ಪೊಲೀಸ್ ನವಕರರಿಗೂ ಲಗಾಮಾಗತಕ್ಕದ್ದು.

ತಾರೀಖು 21ನೇ ಮಾರ್ಚೀ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗೆಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬನೋಜೀಬ್ ಹುಕುಂ,
ಆರ್. ವಿಜಯೀಂದ್ರಾವ್,
ಸೆಕ್ರಟೇರಿ.